## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ 2013-14ನೇ ಸಾಲಿನ ಯೋಜನೇತರ ಅಡಿಯಲ್ಲಿ ಒಂದನೇ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡುವ ಬಗ್ಗೆ.

---

**ಓದಲಾಗಿದೆ :-**

ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು, ಇವರ ದಿನಾಂಕ : 25-04-2013ರ ಪತ್ರ ಸಂಖ್ಯೆ : ಕುಸ/ಕೃವಿವಿರಾ/289/2013-14.

**ಪ್ರಸ್ತಾವನೆ :-**

ರಾಜ್ಯ ಸರ್ಕಾರವು 2013-14ನೇ ಸಾಲಿನ ಆಯವ್ಯಯದಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಯೋಜನೇತರ ಉದ್ದೇಶಗಳಿಗಾಗಿ ಲೆಕ್ಕಶೀರ್ಷಿಕೆ 2415-80-004-3-00-101 ಅಡಿಯಲ್ಲಿ ರೂ. 3500.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ.

ಮೇಲೆ ಓದಲಾದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಕುಲಸಚಿವರ ದಿನಾಂಕ : 25-04-2013ರ ಪತ್ರದೊಂದಿಗೆ 2012-13ನೇ ಸಾಲಿನಲ್ಲಿ ಯೋಜನೇತರ ಅಡಿಯಲ್ಲಿ ಬಿಡುಗಡೆಯಾದ ಅನುದಾನದ ಖರ್ಚು ಹಾಗೂ ಬಳಕೆ ಪ್ರಮಾಣ ಪತ್ರವನ್ನು ಲಗತ್ತಿಸುತ್ತಾ ರಾಜ್ಯ ಸರ್ಕಾರವು 2013-14ನೇ ಸಾಲಿಗೆ ಯೋಜನೇತರ ಉದ್ದೇಶಗಳಿಗೆ ಲೆಕ್ಕಶೀರ್ಷಿಕೆ 2415-80-004-3-00 ಸಹಾಯಾನುದಾನ 101 ಅಡಿಯಲ್ಲಿ ಹಂಚಿಕೆ ಮಾಡಿರುವ ರೂ. 3500.00 ಲಕ್ಷಗಳ ಪೈಕಿ ರೂ. 875.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಕೃಇ 15 ಕೃವಿರಾ 2013, ಬೆಂಗಳೂರು, ದಿನಾಂಕ : 26-06-2013**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಯೋಜನೇತರ ವೆಚ್ಚಗಳಿಗೆ 2013-14ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 2415-80-004-3-00-101 ಅಡಿಯಲ್ಲಿ ಹಂಚಿಕೆ ಮಾಡಲಾದ ರೂ. 3500.00 ಲಕ್ಷಗಳ ಪೈಕಿ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ವೇತನ ಮತ್ತು ಇನ್ನಿತರೆ ಯೋಜನೇತರ ವೆಚ್ಚಗಳನ್ನು ಭರಿಸುವ ನಿಮಿತ್ತ ರೂ. 875.00 ಲಕ್ಷಗಳನ್ನು (ರೂಪಾಯಿ ಎಂಟು ನೂರ ಎಪ್ಪತ್ತೈದು ಲಕ್ಷಗಳು ಮಾತ್ರ) ಮೊದಲನೇ ತ್ರೈಮಾಸಿಕ ಯೋಜನೇತರ ಅನುದಾನವನ್ನಾಗಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ :-

1. **ಪ್ರತಿ ತಿಂಗಳ ಅನುದಾನವನ್ನು ಆಯಾ ತಿಂಗಳ 20ನೇ ತಾರೀಖಿನಂದು ಅಥವಾ 20ನೇ ತಾರೀಖಿನ ನಂತರ ಹಿಂದಿನ ತಿಂಗಳ ಬಳಕೆ ಪ್ರಮಾಣ ಪತ್ರವನ್ನು ಒದಗಿಸಿ ಬಿಲ್ಲಿಗೆ ಮೇಲು ರುಜು ಪಡೆಯತಕ್ಕದ್ದು;**
2. **ಸರ್ಕಾರವು ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡುವುದೋ ಅದೇ ಉದ್ದೇಶಕ್ಕಾಗಿ ಅನುದಾನವನ್ನು ಉಪಯೋಗಿಸತಕ್ಕದ್ದು;**
3. **ಸರ್ಕಾರವು ನೀಡಿದ ಸೂಚನೆ, ಆದೇಶಗಳನುಸಾರ ಕೃಷಿ ವಿಶ್ವವಿದ್ಯಾಲಯದವರು ಯೋಜನೆಯ ವೆಚ್ಚದಲ್ಲಿ ಕಟ್ಟುನಿಟ್ಟಾಗಿ ಮಿತವ್ಯಯವನ್ನು ಪಾಲಿಸತಕ್ಕದ್ದು;**

4. ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಸೂಕ್ತ ಸಮಯದಲ್ಲಿ ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು;
5. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಆರ್ಥಿಕ ಇಲಾಖೆಯು ನೀಡಬಹುದಾದ ಸೂಚನೆಗಳಿಗೆ ಒಳಪಟ್ಟಿರುತ್ತದೆ;
6. ಆಯಾ ತಿಂಗಳಿಗೆ ಪ್ರತ್ಯೇಕ ಬಿಲ್ಲನ್ನು ಒದಗಿಸುವುದು.

2. ಬಿಡುಗಡೆಯಾಗಿರುವ ಅನುದಾನಕ್ಕೆ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು, ಇವರು ಸಲ್ಲಿಸುವ ಸಹಾಯಾನುದಾನದ ಬಿಲ್ಲಿಗೆ ಮೇಲು ರುಜು ಮಾಡುವ ಅಧಿಕಾರವನ್ನು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರಾಯಚೂರು, ಇವರಿಗೆ ನೀಡಲಾಗಿದೆ.

3. ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ದಿನಾಂಕ : 21-06-2013ರ ಟಿಪ್ಪಣಿ ಸಂಖ್ಯೆ : ಕೃಇ 96 ಆಂಆಸ 2013ಯಲ್ಲಿ ನೀಡಿರುವ ಸಹಮತಿ ಹಾಗೂ ಆರ್ಥಿಕ ಇಲಾಖೆಯ ದಿನಾಂಕ : 10-05-2013ರ ಆದೇಶ ಸಂಖ್ಯೆ : ಎಫ್‌ಡಿ 8 ಟಿಎಫ್‌ಪಿ 2013ರಲ್ಲಿ ಆಡಳಿತಾತ್ಮಕ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ವಿತ್ತೀಯ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜೆ. ಆರ್. ವಿಶ್ವನಾಥಾಚಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಕೃಷಿ ಯೋಜನೆ)

ಇವರಿಗೆ :-

1. ಮಹಾಲೇಖಪಾಲರು, ಕರ್ನಾಟಕ (ಲೆಕ್ಕಪತ್ರ/ತನಿಖೆ), ಬೆಂಗಳೂರು.
2. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು.
3. ಜಿಲ್ಲಾ ಖಜಾನಾಧಿಕಾರಿಗಳು, ರಾಯಚೂರು.
4. ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ರಾಯಚೂರು.
5. ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರಾಯಚೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4 & 5), ವಿಧಾನ ಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.